ಸಿ.ಸಿ .ನಂ.34/2023                                   ಪಿಡಬ್ಲೂಃ 1

ದಿನಾಂಕಃ 11-03-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಯು ಎ ವಕೀಲರಿಂದಃ**

16. ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನ್ನ ತಂದೆಯ ಬ್ಯಾಂಕ್ ಖಾತೆಯಲ್ಲಿ 3 ಲಕ್ಷ ರೂಪಾಯಿ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನ್ನ ಹಾಗೂ ನನ್ನ ಹೆಂಡತಿಯ ಬ್ಯಾಂಕ್ ಖಾತೆಯಲ್ಲಿ 3 ಲಕ್ಷ ರೂಪಾಯಿ ಇರಲಿಲ್ಲ. ನಾನು ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನ್ನ ಹೆಂಡತಿಯ ತಂದೆ ಅರೆಸ್ಟ ಆಗಿದ್ದರು ಎಂದರೆ ಸಾಕ್ಷಿಯು ಅವರು ಅರೆಸ್ಟ ಆಗಿದ್ದು ಹೌದು , ಆದರೆ ಅವರು ಯಾವ ದಿನಾಂಕ , ತಿಂಗಳು ಹಾಗೂ ಇಸವಿಯಲ್ಲಿ ಅರೆಸ್ಟ ಆಗಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಆರೋಪಿಯು ನಾನು ನನ್ನ ವಕೀಲರ ಮೂಲಕ ಕಳುಹಿಸಿರುವ ನೋಟಿಸಿಗೆ ನೀಡಿರುವ ಉತ್ತರವನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಸದರಿ ಉತ್ತರವನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ . ಆರೋಪಿಯು ಯಾವುದೇ ಫೋನಿನ ಮುಖಾಂತರ ನನ್ನ ಜೊತೆ ಮಾತನಾಡಿಲ್ಲ ಎಂದರೆ ಸರಿಯಲ್ಲ . ನಾನು ಹೇಳಿದಂತೆ ನನ್ನ ಮತ್ತು ಆರೋಪಿಯ ನಡುವೆ ಶಿಮ್ಲಾ ಕೊಲ್ಡಡ್ರಿಂಕ್ಸ ಅಂಗಡಿಯಲ್ಲಿ ಯಾವುದೇ ಮಾತುಕತೆ ನಡೆದಿಲ್ಲ ಹಾಗೂ ಸದರಿ ಅಂಗಡಿ ಎಲ್ಲಿ ಇದೆ ಎಂದು ಆರೋಪಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಕೊಟ್ಟಿದ್ದರು ಎಂದು ಹೇಳಿದ ಚೆಕ್ ನಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ . ಸದರಿ ಚೆಕ್ ನಲ್ಲಿರುವ ಯಾವುದೇ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ . ಆರೋಪಿಯು ನನಗೆ ಯಾವುದೇ ಹಣವನ್ನು ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಯಾವುದೇ ಹಣವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ . ಆರೋಪಿಯು ತನ್ನ ಚೆಕ್ ಕಾಣೆಯಾದ ತಕ್ಷಣ

ಪಿಡಬ್ಲೂಃ 1

ನಿಗಧಿತ ಸಮಯದಲ್ಲಿ ಪೋಲಿಸ್ ಫಿರ್ಯಾದನ್ನು ಕೊಟ್ಟು ಅವರ ಖಾತೆಯನ್ನು ಬಂದು ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಫಿರ್ಯಾದನ್ನು ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ಫಿರ್ಯಾದನ್ನು ನೀಡಿ ಅವರಿಗೆ ತೊಂದರೆ ಕೊಟ್ಟಿರುವುದಕ್ಕೆ ನಾನೇ ಆರೋಪಿಗೆ ಪರಿಹಾರವನ್ನು ಕೊಡಬೇಕು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.